**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ಅರಕಲಗೂಡು**

**ಸಿ.ಸಿ.ನಂಃ 751 / 2021**

ದಿನಾಂಕಃ **20 / 06 / 2023**

ಫಿರ್ಯಾದಿ :- ಆರಕ್ಷಕ ಉಪ-ನಿರೀಕ್ಷಕರು,
ಅರಕಲಗೂಡು ಪೊಲೀಸ್ ಠಾಣೆ,
ಅರಕಲಗೂಡು

ವಿರುದ್ಧ

ಆರೋಪಿಗಳು :- ಕೇಶವ ಬಿನ್ ಲೇಟ್ ಸಣ್ಣಯ್ಯ ಮತ್ತು ಇತರರು

**:: ದೋಷಾರೋಪಣೆ ::**

ಶ್ರೀ.ಪ್ರೀತಿ ಎಲ್ ಮಳವಳ್ಳಿ ಬಿ.ಬಿ.ಎ. ಎಲ್.ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಕಲಗೂಡು ಆದ ನಾನು,

ಆರೋಪಿಗಳು :

1. ಕೇಶವ ಬಿನ್ ಲೇಟ್ ಸಣ್ಣಯ್ಯ ,50 ವರ್ಷ,
2. ಸರೋಜ ಉ ಸರೋಜಮ್ಮ ಕೋಂ ಕೇಶವ, 40 ವರ್ಷ,
3. ಕೇಶವ ಬಿನ್ ಅಣ್ಣಯ್ಯ, 35 ವರ್ಷ,
4. ಸುನಿತ ಕೋಂ ಕೇಶವ, 30 ವರ್ಷ,
   ಎಲ್ಲಾ ಆರೋಪಿತರ ವಾಸಃ
   ಮರಡಿ ಗ್ರಾಮ, ಕಸಬಾ ಹೋಬಳಿ,
   ಅರಕಲಗೂಡು ತಾಲ್ಲೂಕು

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕಃ 14/04/2021 ರಂದು ರಾತ್ರಿ ಸುಮಾರು 8-00 ಗಂಟೆ ಸಮಯದಲ್ಲಿ ಅರಕಲಗೂಡು ಪೊಲೀಸ್ ಠಾಣಾ ಸರಹದ್ದಿನ ಮರಡಿ ಗ್ರಾಮದಲ್ಲಿ ಚಾಸಾ-2 ಜಯಮ್ಮ ರವರು ಮನೆಯಲ್ಲಿ ಇರುವಾಗ ಆರೋಪಿತರಾದ ನೀವುಗಳು ಅಪರಾಧ ಮಾಡುವ ಏಕೋದ್ದೇಶದಿಂದ ಜಮೀನು ಮತ್ತು ಮನೆಯನ್ನು ಖಾತೆ ಮಾಡಿಸಿಕೊಳ್ಳಲು ಸಹಿ ಹಾಕು ಎಂದು ಗಲಾಟೆ ಮಾಡಿ ಕೈಯಿಂದ ಚಾಸಾ-2 ಜಯಮ್ಮರವರ ಮೈ-ಕೈಗೆ ಹೊಡೆಯುತ್ತಿರುವಾಗ ಚಾಸಾ-1 ನಾಗರಾಜರವರು ಏನು ಎಂದು ಕೇಳಿದಾಗ ಚಾಸಾ-2

ಜಯಮ್ಮ ರವರು ಎಲ್ಲಾ ವಿಷಯವನ್ನು ಹೇಳಿದಾಗ ಚಾಸಾ-**1** ನಾಗರಾಜರವರು ಪೊಲೀಸ್ ಠಾಣೆಗೆ ಹೋಗಿ ದೂರು ನೀಡು ಎಂದು ತಿಳಿಸಿದ್ದು, ಚಾಸಾ-**2** ಜಯಮ್ಮರವರು ದೂರು ನೀಡಲು ಹೋಗುತ್ತಿರುವಾಗ **1** ನೆ ಆರೋಪಿ ಕೇಶವ ಮತ್ತು **2** ನೇ ಆರೋಪಿ ಸರೋಜ ಉ ಸರೋಜಮ್ಮ ಆದ ನೀವುಗಳು ಚಾಸಾ-**2** ಜಯಮ್ಮರವರನ್ನು ಹಿಡಿದುಕೊಂಡು ಅಪಮಾನವಾಗುವ ರೀತಿಯಲ್ಲಿ ಎಳೆದಾಡಿ, ಜಗಳ ಬಿಡಿಸಲು ಬಂದ ಚಾಸಾ-**3** ರೇಖಾ ರವರಿಗೆ ಆರೋಪಿಗಳಾದ ನೀವುಗಳು ಅಪಮಾನವಾಗುವ ರೀತಿ ಎಳೆದಾಡಿರುತ್ತೀರಿ . ಆದ್ದರಿಂದ ಭಾ.ದಂ.ಸಂ.ಕಲಂಃ 354 ಸಹವಾಚಕ ಕಲಂಃ **34** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವುಗಳು ಅಪರಾಧ ಮಾಡುವ ಏಕ್ಕೋದ್ದೇಶದಿಂದ, **1** ನೆ ಆರೋಪಿ ಕೇಶವ ಮತ್ತು **2** ನೇ ಆರೋಪಿ ಸರೋಜ ಉ ಸರೋಜಮ್ಮ ಆದ ನೀವುಗಳು ಚಾಸಾ-**2** ಜಯಮ್ಮ ಹಾಗೂ ಚಾಸಾ-**3** ರೇಖಾರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿಆದ್ದರಿಂದ ಭಾ.ದಂ.ಸಂ.ಕಲಂಃ 504 ಸಹವಾಚಕ ಕಲಂಃ **34** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವುಗಳು ಅಪರಾಧ ಮಾಡುವ ಏಕ್ಕೋದ್ದೇಶದಿಂದ 1 ನೇ ಆರೋಪಿ ಕೇಶವ ಆದ ನೀವು ಕೈಯಿಂದ ಚಾಸಾ-2 ಜಯಮ್ಮರವರ ಎಡಭುಜಕ್ಕೆ, ಹಾಗೂ 2 ನೇ ಆರೋಪಿ ಸರೋಜ ಉ ಸರೋಜಮ್ಮ ಆದ ನೀವು ಕೈಯಿಂದ ಚಾಸಾ-2 ಜಯಮ್ಮರವರ ಕುತ್ತಿಗೆ ಹಿಂಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಪಡಿಸಿರುತ್ತೀರಿ ಕೇಳಲು ಹೋದ ಚಾಸಾ-1 ನಾಗರಾಜರವರಿಗೆ ಹಿಡಿದುಕೊಂಡು ಎಳೆದಾಡಿ 2 ನೇ ಆರೋಪಿ ಸರೋಜ ಉ ಸರೋಜಮ್ಮ ಆದ ನೀವು ಕೈಯಿಂದ ಚಾಸಾ-1 ನಾಗರಾಜರವರ ಎದೆಗೆ ಹೊಡೆದು ನೋವುಂಟುಪಡಿಸಿರುತ್ತೀರಿ . ಆದ್ದರಿಂದ ಭಾ.ದಂ.ಸಂ.ಕಲಂಃ 323 ಸಹವಾಚಕ ಕಲಂಃ **34** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವುಗಳು ಅಪರಾಧ ಮಾಡುವ ಏಕ್ಕೋದ್ದೇಶದಿಂದ 1 ರಿಂದ 4 ನೇ ಆರೋಪಿಗಳಾದ ನೀವುಗಳು ಚಾಸಾ-1 ನಾಗರಾಜರವರನ್ನು ಕೆಳಕ್ಕೆ ಕೆಡವಿಕೊಂಡು 1 ನೇ ಆರೋಪಿ ಕೇಶವ ಆದ ನೀವು ದೊಣ್ಣೆಯಿಂದ ಚಾಸಾ-1 ನಾಗರಾಜರವರ ಎಡಕಾಲಿನ ಬೆರಳಿಗೆ ಹೊಡೆದು, 3 ನೇ ಆರೋಪಿ ಕೇಶವ ಬಿನ್ ಅಣ್ಣಯ್ಯ ಆದ ನೀವು ಕಲ್ಲನ್ನು ಚಾಸಾ-1 ನಾಗರಾಜರವರ ಎಡಕಾಲಿನ ಬೆರಳಿಗೆ ಎತ್ತಿ ಹಾಕಿ, ಜಗಳ ಬಿಡಿಸಲು ಬಂದ ಚಾಸಾ-3 ರೇಖಾರವರಿಗೆ ಆರೋಪಿಗಳಾದ ನೀವುಗಳು ಕಬ್ಬಿಣದ ರಾಡಿನಿಂದ ತಲೆಯ ಮಧ್ಯಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವುಗಳನ್ನುಂಟು ಮಾಡಿರುತ್ತೀರಿ. ಆದ್ದರಿಂದ ಭಾ.ದಂ.ಸಂ.ಕಲಂಃ 324 ಸಹವಾಚಕ ಕಲಂಃ **34** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಐದನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವುಗಳು ಅಪರಾಧ ಮಾಡುವ ಏಕೋದ್ದೇಶದಿಂದ ಆರೋಪಿಗಳಾದ ನೀವುಗಳು ಚಾಸಾ−1 ನಾಗರಾಜ, ಚಾಸಾ−2 ಜಯಮ್ಮ ಹಾಗೂ ಚಾಸಾ−3 ರೇಖಾರವರಿಗೆ ಕೊಲೆ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ಭಾ.ದಂ.ಸಂ.ಕಲಂಃ 506 ಸಹವಾಚಕ ಕಲಂಃ **34** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನನ್ನ ಸಮಕ್ಷಮದಲ್ಲಿ ಪಡೆದುಕೊಳ್ಳಲಾಯಿತು.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಅರಕಲಗೂಡು

ಅರಕಲಗೂಡು ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ

ಸಿ.ಸಿ. ಸಂಖ್ಯೆ 751 / 2021

ಪಿರ್ಯಾದಿ : ಅರಕಲಗೂಡು ಪೊಲೀಸ್

: ವಿರುದ್ದ :

1 ನೇ ಆರೋಪಿ: : ಕೇಶವ ಬಿನ್ ಲೇಟ್ ಸಣ್ಣಯ್ಯ ,50 ವರ್ಷ,

ಪ್ರ –1 : ನಿಮಗೆ ಮೇಲೆ ವಿವರಿಸಿದ ದೋಷಾರೋಪಣೆ ವಿವರಗಳು ತಿಳಿಯಿತೇ ?

ಉತ್ತರ : –

ಪ್ರ –2 :ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ಆಗಬೇಕೆ ?

ಉತ್ತರ :

(ಆರೋಪಿಗೆ ದೋಷಾರೋಪಣೆಯನ್ನು ರಚಿಸಿ ವಿವರಿಸಿ ಓದಿ ಹೇಳಿದ್ದು ಆ ಪ್ರಕಾರವಾಗಿ ಆತ ಕೊಟ್ಟ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ)

ಆರೋಪಿ ಸಹಿ

ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಅರಕಲಗೂಡು

ಅರಕಲಗೂಡು ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ

ಸಿ.ಸಿ. ಸಂಖ್ಯೆ 751 / 2021

ಪಿರ್ಯಾದಿ : ಅರಕಲಗೂಡು ಪೊಲೀಸ್

: ವಿರುದ್ದ :

2 ನೇ ಆರೋಪಿ: : ಸರೋಜ ಉ ಸರೋಜಮ್ಮ ಕೋಂ ಕೇಶವ,

ಪ್ರ –1 : ನಿಮಗೆ ಮೇಲೆ ವಿವರಿಸಿದ ದೋಷಾರೋಪಣೆ ವಿವರಗಳು ತಿಳಿಯಿತೇ ?

ಉತ್ತರ : –

ಪ್ರ –2 :ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ಆಗಬೇಕೆ ?

ಉತ್ತರ :

(ಆರೋಪಿಗೆ ದೋಷಾರೋಪಣೆಯನ್ನು ರಚಿಸಿ ವಿವರಿಸಿ ಓದಿ ಹೇಳಿದ್ದು ಆ ಪ್ರಕಾರವಾಗಿ ಆತ ಕೊಟ್ಟ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ)

ಆರೋಪಿ ಸಹಿ

ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಅರಕಲಗೂಡು

ಅರಕಲಗೂಡು ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ

**ಸಿ.ಸಿ. ಸಂಖ್ಯೆ 751 / 2021**

ಪಿರ್ಯಾದಿ : ಅರಕಲಗೂಡು ಪೊಲೀಸ್

: ವಿರುದ್ದ :

**3 ನೇ** ಆರೋಪಿಃ : ಕೇಶವ ಬಿನ್ ಅಣ್ಣಯ್ಯ,

ಪ್ರ –1 ಃ ನಿಮಗೆ ಮೇಲೆ ವಿವರಿಸಿದ ದೋಷಾರೋಪಣೆ ವಿವರಗಳು ತಿಳಿಯಿತೇ ?

ಉತ್ತರ ಃ –

ಪ್ರ –2 ಃಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ಆಗಬೇಕೆ ?

ಉತ್ತರ ಃ

(ಆರೋಪಿಗೆ ದೋಷಾರೋಪಣೆಯನ್ನು ರಚಿಸಿ ವಿವರಿಸಿ ಓದಿ ಹೇಳಿದ್ದು ಆ ಪ್ರಕಾರವಾಗಿ ಆತ ಕೊಟ್ಟ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ)

ಆರೋಪಿ ಸಹಿ

ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಅರಕಲಗೂಡು

ಅರಕಲಗೂಡು ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ

ಸಿ.ಸಿ. ಸಂಖ್ಯೆ 751 / 2021

ಪಿರ್ಯಾದಿ : ಅರಕಲಗೂಡು ಪೊಲೀಸ್

: ವಿರುದ್ದ :

4 ನೇ ಆರೋಪಿಃ : ಸುನಿತ ಕೋಂ ಕೇಶವ,

ಪ್ರ –1 ಃ ನಿಮಗೆ ಮೇಲೆ ವಿವರಿಸಿದ ದೋಷಾರೋಪಣೆ ವಿವರಗಳು ತಿಳಿಯಿತೇ ?

ಉತ್ತರ ಃ –

ಪ್ರ –2 ಃಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ಆಗಬೇಕೆ ?

ಉತ್ತರ ಃ

(ಆರೋಪಿಗೆ ದೋಷಾರೋಪಣೆಯನ್ನು ರಚಿಸಿ ವಿವರಿಸಿ ಓದಿ ಹೇಳಿದ್ದು ಆ ಪ್ರಕಾರವಾಗಿ ಆತ ಕೊಟ್ಟ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ)

ಆರೋಪಿ ಸಹಿ

ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಅರಕಲಗೂಡು